ಶ್ರೀಅರವಿಂದರು, ಶ್ರೀಮಾತೆಯವರು ನನ್ನ ಜೀವದ ಕಣ ಕಣಗಳಲ್ಲಿ ಬೆರೆತಿರುವುದನ್ನು ವಿವರಿಸಲಿಕ್ಕಾಗದು. ಅದು ಅನುಭವ ವೇದ್ಯ ಅಷ್ಟೆ. ಅದು ಶಬ್ದರಹಿತ ಅನುಭವ; ಅನುಭಾವ ಗಟ್ಟಿಗೊಂಡ ನಿಶ್ಶಬ್ದ. ಅವರ ಅನುಭಾವದನುಗ್ರಹವೇ ನನ್ನ ಬದುಕಿನ ಪಥಕ್ಕೆ ದೊರೆತ ಬೆಳಕು.

- **'ಅನುಭಾವ'ವೆನ್ನುವ ಆತ್ಮಿಕ ಸಂತೋಷದ ಅನುಭವವನ್ನು 'ಅದು ನಮಗೆ ನಿಲುಕದ ಹಣ್ಣು' ಎನ್ನುವವರೇ ಬಹಳ. ಅನುಭಾವ ಅಷ್ಟು ಕಷ್ಟವೆ? ಅದರ ಸಾಧನೆ ಅಸಾಧ್ಯವೆ? ಅದರ ದಾರಿ ಅಷ್ಟು ದುರ್ಗಮವೆ? ಅನುಭವ ಮತ್ತು ಅನುಭಾವಗಳ ಸಂಬಂಧ ಎಂಥದ್ದು?**

'ಅನುಭಾವ' ಕಷ್ಟದ್ದಲ್ಲ, ಅದು ಸುಲಭಾತಿ ಸುಲಭ, ವಚನಕಾರ ಹೇಳಿರುವ 'ನಂಬಿ ಕರೆದಡೆ ಓ ಎನ್ನನೆ ಶಿವನು?' ಎಂಬ ಅರ್ಥಪೂರ್ಣ ಮಾತು ಹಾಗೂ ದಾಸರು ಹೇಳಿದ 'ಏನು ಸುಲಭನೋ ಹರಿ, ತನ್ನವರ ಬಿಟ್ಟು ಅರಗಳಿಗೆ ಅಗಲಿರನೋ!' ಎಂಬ ನಂಬಿಗೆ ಅನುಭಾವದ ಮಾರ್ಗಗಳು. ಅಚಲ ಶ್ರದ್ಧೆ ಮತ್ತು ನಿಶ್ಚಲ ಭಕ್ತಿಯ ಸಂಗಮ ಅದು. ಅವೇ ಅದರ ಆಧಾರ ಸ್ತಂಭಗಳೂ ಕೂಡ. ಸಮಗ್ರ ಬದುಕನ್ನು ಒಂದು ನೀತಿಸಂಹಿತೆಗೆ ಒಳಪಡಿಸಿಕೊಳ್ಳುವ ಮೂಲಕ ಅದನ್ನು ಸಾಧಿಸಬೇಕಾಗುತ್ತದೆ. 'Every sincere prayer is granted' ಎಂಬುದು ಶ್ರೀಮಾತೆಯವರ ದೃಢ ನಿಲುವು. ಇದಕ್ಕೆ ಬೇಕಾದದ್ದು sincerity. ಅದು ಅಚಲವೂ, ಗಾಢವೂ ಆಗಿರಬೇಕು, ಅಷ್ಟೆ.

- **'ಅಭೀಪ್ಸೆ (Aspiration), ನಿರಾಕರಣೆ (Rejection) ಮತ್ತು ಸಮರ್ಪಣೆ (Surrennder)' ಇವು ಪೂರ್ಣಯೋಗದ ಮೂರು ಬೀಜಮಂತ್ರಗಳೆನ್ನುತ್ತಾರೆ. ಇವುಗಳ ಕ್ರಿಯಾತ್ಮಕ ಆಚರಣೆ ಮತ್ತು ಕ್ರಮ ಹೇಗೆ?**

ನಿಜ. ಅಭಿಪ್ಸೆ, ನಿರಾಕರಣೆ, ಸಮರ್ಪಣ – ಇವು ಮೂರು ಪೂರ್ಣಯೋಗದ ಮೂಲಸೂತ್ರಗಳು. ಅಭೀಪ್ಸೆ ಎಂದರೆ ಅಚಲವಾದ ನಿಷ್ಠೆ. ನಿರಾಕರಣೆ ಎಂದರೆ ಆಸೆ– ಆಮಿಷಗಳಿಗೆ ಬಲಿಯಾಗದಿರುವುದು. ಸಮರ್ಪಣೆ ಅಂದರೆ ನಮ್ಮನ್ನು ಸಮಗ್ರವಾಗಿ ನಾವು ನಂಬಿದ ತಾತ್ವಿಕತೆ ಅಥವಾ ದೈವತ್ವಕ್ಕೆ ಒಪ್ಪಿಸಿಕೊಳ್ಳುವುದು. ಈ ಮೂರೂ ಸೂತ್ರಗಳು ಭದ್ರವಾಗಿದ್ದಾಗ ಜೀವನ ತಂತಾನೆ 'All life is yoga' (ಜೀವನೆಲ್ಲವೂ ಯೋಗ) ಆಗುತ್ತದೆ. ಅತಿಮಾನಸ ಸಿದ್ಧಿ ದೊರಕುತ್ತದೆ. ಈ ಮಾತುಗಳಲ್ಲೇ ಅದರ ಕ್ರಿಯಾತ್ಮಕ ಆಚರಣೆಯ ಪಥವಿದೆ.

- **ವಚನಕಾರರಿಂದ ಆರಂಭಗೊಂಡು ಕನ್ನಡ ಸಾಹಿತ್ಯದ ಇಡೀ ಧಾರೆಯೊಂದಿಗೆ ಹುರಿಗೊಂಡು ನಿರಂತರ ಹರಿಯುತ್ತಲೇ ಬಂದಿದೆ ಅನುಭಾವ. ಇಂಥ ಅನುಭಾವ ಮತ್ತು ಸಾಹಿತ್ಯದ ಸಂಬಂಧದ ಸ್ವರೂಪವನ್ನು ಕುರಿತಂತೆ ಕೆಲವು ವಿಚಾರಗಳನ್ನು ಹೇಳಬಹುದೆ?**

ಯಾವುದೋ ಶುಭಗಳಿಗೆ ಶರಣರು ವಚನಗಳನ್ನು ಬರೆದರು. ತಮ್ಮದೇ ಆದ ಸಾಧನಾಪಥವೊಂದನ್ನು ರೂಪಿಸಿಕೊಂಡು ಆಚಾರವಿಚಾರಗಳನ್ನು ಒಂದುಗೂಡಿಸಿ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದು (ಸ್ತ್ರೀಪುರುಷ ಭೇದವಳಿಸಿ ಹಾಕಿ), ಉಚ್ಚನೀಚತನದ ವೈಷಮ್ಯ ತೊಡೆದು ಹಾಕಿ, ಹೊಸ ಸಮಾಜದ ನಿರ್ಮಾಣಕ್ಕೆ ತೊಡಗಿದರು. ತಾವು ನಡೆದು ಅನುಭವಿಸಿದ್ದನ್ನು ಅಕ್ಷರ ಸಂಸ್ಕೃತಿಗೆ ತರಲು ಯತ್ನಿಸಿದ್ದರ ಫಲವೇ ವಚನ ಸಾಹಿತ್ಯ. ಅವರು ಕವಿಯಾಗಲು, ಸಾಹಿತಿಯಾಗಲು ಹೊರಟವರಲ್ಲ. ಘನಮನ ಸಂಪನ್ನರಾಗುವ ತುಡಿತ ಅವರದು. ಇನ್ನೂ ವಿಶೇಷವೆಂದರೆ ನಿಷ್ಪತ್ತಿಯೆಂಬ ಹಣ್ಣಾಗುವ ಘನೋದ್ದೇಶ ಉಳ್ಳವರು. ಹನ್ನೊಂದು ಹನ್ನೆರಡನೆಯ ಶತಮಾನ ಕರ್ನಾಟಕದಲ್ಲಿ ಒಂದು ಅನನ್ಯವಾದ ಪರ್ವಕಾಲ. ಅದು ಅನುಭಾವಿಗಳ ಕ್ರಾಂತಿಯ ಕಾಲ. ಬುದ್ಧನ ತರುವಾಯ ಭಾರತದ ಬೆಳ್ಳಂಬೆಳಕಿನ ಕಾಲ. ಅದರ ಪ್ರಭಾವ ಎಷ್ಟಿತ್ತೆಂದರೆ,